ಮಾಡಿಕೊಡಬೇಕಾಗುತ್ತದೆ. ತಲಾ ತಲಾಂತರದಿಂದ ಅಸಮಾನತೆಯಲ್ಲಿ. ಅಸ್ಪೃಶ್ಯತೆಯ ನೆರಳಿನಲ್ಲಿ ಬದುಕುತ್ತಿರುವವರ ಬಗ್ಗೆ ನೀವು ಇಷ್ಟೊಂದು ಕಠೋರವಾಗಿ ನಡೆದುಕೊಂಡರೆ ಹೇಗೆ? ಇದನ್ನು ತಾವು ಸ್ಪೆಷಲ್ ಆಗಿ ಮಾಡಬೇಕಾಗುತ್ತದೆ.

ಡಾ: ವೈ.ನಾಗಪ್ಪ : ನಾನು ಹಿಂದುಳಿದ ವರ್ಗಕ್ಕೆ ಸೇರಿರುವ ವ್ಯಕ್ತಿ. ಅವರ ಬಗ್ಗೆ ನಮಗೂ ಸಹ ಕಳಕಳಿ ಇದೆ. ನಾವು ಇದರ ಬಗ್ಗೆ ಆರ್ಥಿಕ ಇಲಾಖೆಗೆ ಬರೆದಿದ್ದು ಅವರಿಂದ ಅನುಮತಿ ನಮಗೆ ಇನ್ನೂ ಸಿಕ್ಕಿಲ್ಲ. ಆ ದೃಷ್ಟಿಯಿಂದ ಇದನ್ನು ಪೆಂಡಿಂಗ್ ಇಟ್ಟಿದ್ದೇವೆ.

ಶ್ರೀ ಕಾರಜೋಳ ಗೋವಿಂದ ವೆಂಕಟಪ್ಪ : ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಉಪ ಕಾರ್ಯದರ್ಶಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ನಿಮ್ಮ ಕೈಕೆಳಗೆ ಕೆಲಸ ಮಾಡುವಂತಹ ಅಡಿಷನಲ್ ಸೆಕ್ರೆಟರಿಯವರನ್ನು ನಿಮ್ಮ ಚೇಂಬರ್‌ಗೆ 10 ನಿಮಿಷದಲ್ಲಿ ಕರೆಸಬಹುದು. ಅವರು ನಿಮ್ಮ ಮೇಲಿನವರು ಅಂತ ತಿಳಿದಿದ್ದರೇನು? ಅವರನ್ನು ಕರೆಸಿರಿ. ಎಲ್ಲಾ ಇಲಾಖೆಯಲ್ಲೂ ಶೇಕಡ 18 ರಷ್ಟು ಗ್ರಾಂಟ್ ಇದೆ. ಆ ಹಣವನ್ನು ಯೂಸ್ ಮಾಡಿ ಈ ಜನಾಂಗದ ಉದ್ಧಾರಕ್ಕಾಗಿ ಕೆಲಸ ಮಾಡಿ. ಅವರನ್ನು ಕರೆದು ನಿಮ್ಮ ಸಂಬಳವನ್ನು ಬಂದ್ ಮಾಡುತ್ತೇನೆ ಅಂತ ಅವರಿಗೆ ಹೇಳಿ. ಆ ಕೆಲಸ ಆಗುವವರೆಗೂ ಮುಂದಿನ ತಿಂಗಳ ಸಂಬಳವನ್ನು ತೆಗೆದುಕೊಳ್ಳಬಾರದು ಅಂತ ಹೇಳಿ. ಆ ಸೆಕ್ರೆಟರಿಗಳು ದಾನ ಧರ್ಮಕ್ಕೋಸ್ಕರ ಕೆಲಸ ಮಾಡುತ್ತಾರೆಯೇ?

ಡಾ : ವೈ.ನಾಗಪ್ಪ : ಆಯಿತು. ತಾವು ಹಿರಿಯ ಸದಸ್ಯರು ಹೇಳಿದಂತೆ ಇದರ ಬಗ್ಗೆ ಗಮನ ಹರಿಸಿ ಆದಷ್ಟು ಬೇಗ ಇದನ್ನು ತೆಗೆದುಕೊಳ್ಳುತ್ತೇವೆ.

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **1884**

2) ಸದಸ್ಯರ ಹೆಸರು : ಶ್ರೀ ಪರಮೇಶ್ವರ ನಾಯ್ಕ ಪಿ.ಟಿ.(ಹರಪನಹಳ್ಳಿ)

3) ಉತ್ತರಿಸುವ ಸಚಿವರು : ಶ್ರೀ ಮೆರಾಜುದ್ದೀನ ಎನ್.ಪಟೇಲ್\
(ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು)

ಕ್ರ.ಸಂ. ಪ್ರಶ್ನೆ

ಅ) ಹರಪನಹಳ್ಳಿ ವ್ಯಾಪ್ತಿಯಲ್ಲಿ ಬರುವ ಕಡತಿ. ಮಾಚಿಹಳ್ಳಿ. ಬಾಗಳಿ. ಕೆ.ಕಲ್ಲಳ್ಳಿ. ಮುಂತಾದ ಗ್ರಾಮಗಳಲ್ಲಿ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು (ಆರ್.ವಿ.ಡಿ.) ಸರ್ಕಾರ ಉದ್ದೇಶಿಸಿದೆಯೇ:

ಉತ್ತರ

ರಾಜ್ಯದಲ್ಲಿ ಹಾಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಸಾಕಷ್ಟು ಇದ್ದು ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ತೆರೆಯುವ ಅವಶ್ಯಕತೆ ಕಂಡು ಬರುವುದಿಲ್ಲ. ಆದಾಗ್ಯೂ ಡಾ:ನಂಜುಡಪ್ಪ ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನಂತೆ ಎಲ್ಲಿ ಪಶುವೈದ್ಯಕೀಯ ಸಂಸ್ಥೆಗಳು ಜಾನುವಾರು ಸಂಖ್ಯೆಗೆ ಅನುಸಾರವಾಗಿ ಕಡಿಮೆ ಇರುವುದೋ ಅಂತಹ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಸಂಸ್ಥೆಗಳನ್ನು ತೆರೆಯಲು ಕ್ರಮಕೈಗೊಳ್ಳಲಾಗುವುದು.

ಹರಪನಹಳ್ಳಿ ತಾಲ್ಲೂಕು ಬಾಗಳಿ ಗ್ರಾಮದಲ್ಲಿ ಕೃತಕ ಗರ್ಭಧಾರಣಾ ಕೇಂದ್ರವು ಕಳೆದ 20 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು. ವೈದ್ಯಕೀಯ ಸೌಲಭ್ಯಗಳನ್ನು ಸಹ ಈ ಕೇಂದ್ರದಿಂದ ಒದಗಿಸಿಲಾಗುತ್ತಿದೆ. ಕಡತಿ ಗ್ರಾಮಕ್ಕೆ ಹುಲುವಾಗಿಲು ಪಶು ಆಸ್ಪತ್ರೆಯಿಂದ ಮಾಚಿಹಳ್ಳಿ ಗ್ರಾಮಕ್ಕೆ ಗುನ್ನಗತ್ತಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರದಿಂದ ಕೆ.ಕಲ್ಲಹಳ್ಳಿ ಗ್ರಾಮಕ್ಕೆ ಅರಸನಹಳ್ಳಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರದಿಂದ ವೈದ್ಯಕೀಯ ಸೌಲಭ್ಯಗಳನ್ನು ಕ್ರಮವಾಗಿ ಒದಗಿಸಲಾಗುತ್ತಿದೆ.

ಕ್ರ.ಸಂ.	ಪ್ರಶ್ನೆ	ಉತ್ತರ
ಆ)	ಹಾಗಿದ್ದಲ್ಲಿ. ಈ ಬಗ್ಗೆ ಕೈಗೊಂಡ ಕ್ರಮಗಳೇನು:	ಮೇಲಿನಂತೆ–

ಕ್ರ.ಸಂ. ಪ್ರಶ್ನೆ

ಇ) ಈ ಕೇಂದ್ರಗಳನ್ನು ಎಂದಿನಿಂದ ತೆರೆಯಲಾಗುವುದು.

ಉತ್ತರ

ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ (ಶ್ರೀ ಪರಮೇಶ್ವರ ನಾಯ್ಕ ಪಿ.ಟಿ. ಇವರ ಪರವಾಗಿ): ಹರಪನಹಳ್ಳಿ ವ್ಯಾಪ್ತಿಯಲ್ಲಿ ಬರುವ ಕಡತಿ. ಮಾಚಿಹಳ್ಳಿ. ಬಾಗಳಿ. ಕೆ.ಕಲ್ಲಳ್ಳಿ ಮುಂತಾದ ಗ್ರಾಮಗಳಲ್ಲಿ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು(ಆರ್.ವಿ.ಡಿ.) ಸರ್ಕಾರ ಉದ್ದೇಶಿಸಿದೆಯೇ. ಅಂತ ಪ್ರಶ್ನೆ ಕೇಳಲಾಗಿದೆ. ಅದಕ್ಕೆ ಅವರು ಈ ರೀತಿ ಉತ್ತರಿಸಿದ್ದಾರೆ. ರಾಜ್ಯದಲ್ಲಿ ಹಾಲಿ ಇರುವ ಪಶುವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಸಾಕಷ್ಟು ಇದ್ದು ಹೊಸ ವೈದ್ಯಕೀಯ ಸಂಸ್ಥೆಗಳನ್ನು ತೆರೆಯುವ ಅವಶ್ಯಕತೆ ಕಂಡು ಬರುವುದಿಲ್ಲ.

ಆದಾಗ್ಯೂ ಡಾ:ನಂಜುಂಡಪ್ಪ ಸಮಿತಿಯ ವರದಿಯಲ್ಲಿನ ಶಿಫಾರಸ್ಸಿನಂತೆ ಎಲ್ಲಿ ಪಶುವೈದ್ಯಕೀಯ ಸಂಸ್ಥೆಗಳು ಜಾನುವಾರು ಸಂಖ್ಯೆಗೆ ಅನುಸಾರವಾಗಿ ಕಡಿಮೆ ಇರುವುದೋ ಅಂತಹ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಸಂಸ್ಥೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು. ಆಮೇಲೆ ಹರಪನಹಳ್ಳಿ ತಾಲ್ಲೂಕಿಗೆ ಬೇರೆ ಬೇರೆ ವ್ಯವಸ್ಥೆಯಿಂದ ಮಾಡುತ್ತೇವೆಂದು ಹೇಳಿದ್ದಾರೆ. ಮನುಷ್ಯರ ದವಾಖಾನೆ ಸ್ವಲ್ಪ ತಡವಾಗಿ ತೆಗೆದರೆ ನಡೆಯುತ್ತದೆ. ನಾವು ರೈತರ ಮಕ್ಕಳು. ಸಾಮಾನ್ಯವಾಗಿ ಪಶು ಸಂಪತ್ತು ಹಾಳಾಗುತ್ತದೆ. ರಾಜ್ಯದಲ್ಲಿ ಪಶು ಸಂತಾನ ಕಡಿಮೆಯಾಗುತ್ತಿದೆ. ಅಲ್ಲಿ ರೋಗ ಬಂದರೆ ಕೇಳುವವರಿಲ್ಲ. ಆ ಕಾರಣದಿಂದ ಮಾನ್ಯ ಸಚಿವರಲ್ಲಿ ನಾನು ಕೇಳುತ್ತಿದ್ದೇನೆ. ದಯವಿಟ್ಟು ಆರ್ಥಿಕ ಇಲಾಖೆಯವರ ಅನುಮತಿಯನ್ನು ತೆಗೆದುಕೊಂಡು ಕನಿಷ್ಟ ಪ್ರತಿ ಪಂಚಾಯ್ತಿಗೊಂದು ಪಶುವೈದ್ಯ ಚಿಕಿತ್ಸಾ ಕೇಂದ್ರವನ್ನು ತೆಗೆಯಬೇಕು. ಇಲ್ಲದಿದ್ದರೆ ಅಲ್ಲಿ ಪರಿಸ್ಥಿತಿ ಬಹಳ ತೊಂದರೆಗೀಡಾಗಿದ್ದು ಬಹಳ ದನಗಳು ಸಾಯುತ್ತಿದ್ದು ಕಸಾಯಿಖಾನೆಗೆ ಹೋಗುತ್ತಿವೆ. ಮೊನ್ನೆ ಕೂಡ ಇದರ ಬಗ್ಗೆ ದೊಡ್ಡ ಚರ್ಚೆಯಾಗಿದೆ. ಈ ದೃಷ್ಟಿಯಿಂದ ದನಗಳ ಸಂಪತ್ತು ಕಡಿಮೆಯಾಗಿ ಅವು ಕಸಾಯಿಖಾನೆಗೆ ಹೋಗುತ್ತಿವೆ. ಆದ್ದರಿಂದ ಈ ಮನುಷ್ಯರ ದವಾಖಾನೆ ಸ್ವಲ್ಪ ಕಡಿಮೆ ಮಾಡಿ ಅದರ ರೊಕ್ಕವನ್ನು ತೆಗೆದುಕೊಂಡು ಉಪಯೋಗಿಸಿ. ರೊಕ್ಕ ಸರ್ಕಾರದಲ್ಲಿ ಕಡಿಮೆಯೇನಿಲ್ಲ. ಸಾಕಷ್ಟು ರೊಕ್ಕ ತೆಗೆದಿಟ್ಟು ಕೊಂಡಿದ್ದಾರೆ. ಈ ಕಳೆದ ಐದು ವರ್ಷಗಳಿಂದ ಒಂದು ಹೊಸ ದವಾಖಾನೆಯನ್ನು ಎಲ್ಲಿಯೂ ಕೊಟ್ಟಿಲ್ಲ. ಆದ್ದರಿಂದ ತಮ್ಮ ಅವಧಿಯಲ್ಲಾದರೂ ಸ್ವಲ್ಪ ಪರ್ಮಿಷನ್ ತೆಗೆದುಕೊಂಡು ವರ್ಷ ಒಂದು ನೂರು ದವಾಖಾನೆಯನ್ನು ತೆರೆಯಲಿಕ್ಕೆ ಅವಕಾಶ ಮಾಡಬೇಕಾಗಿ. ಹಾಗೂ ಶ್ರೀ ಪರಮೇಶ್ವರ ನಾಯ್ಕರವರ ಈ ಗ್ರಾಮಗಳಿಗೆ ತಾವು ಕೊಡುತ್ತೀರಿ ಹೇಗೆ? ಎಂದು ತಿಳಿಸಬೇಕು.

ಶ್ರೀ ಮಿರಾಜುದ್ದೀನ್ ಪಟೇಲ್: ಮಾನ್ಯ ಸದಸ್ಯರು ಈ ವರ್ಷ ಹೊಸದಾಗಿ ಹರಪನಹಳ್ಳಿಗೆ ಪಶು ಚಿಕಿತ್ಸಾ ಕೇಂದ್ರವನ್ನು ನೀಡುವ ಬಗ್ಗೆ ನಿಮ್ಮ ಈ ವರ್ಷದ ಪಟ್ಟಿಯಲ್ಲಿ ಇದೆಯೇ ಅಂತ ಕೇಳುತ್ತಿದ್ದಾರೆ. ನಾವು ಪಾಪ್ಯುಲೇಷನ್ ಆಧಾರದ ಮೇಲೆ ನಾವು ಹಾಸ್ಪಿಟಲ್ಸ್ ಕೊಡುತ್ತಿದ್ದೇವೆ. ದಾವಣಗೆರೆಯ ಹರಪನಹಳ್ಳಿಯ ರಿಕ್ವೈರ್‌ಮೆಂಟ್‌ನಲ್ಲಿ ಪಾಪ್ಯುಲೇಷನ್ ಆಧಾರದ ಮೇಲೆ 24 ಹಾಸ್ಪಿಟಲ್ಸ್ ಇರಬೇಕೆಂದಿದೆ. ಈಗ 24 ಹಾಸ್ಪಿಟಲ್ಸ್ ಅಲ್ಲಿದೆ. ಒಟ್ಟಾರೆ 3763 ಹಾಸ್ಪಿಟಲ್ಸ್ ಇದೆ ಅದರಲ್ಲಿ 394 ವೆಟರ್ನರಿ ಆಸ್ಪತ್ರೆಗಳು. ವೆಟರ್ನರಿ ಡಿಸ್ಪೆನ್ಸರೀಸ್ 1451. ಪೈಮರಿ ವೆಟರ್ನರಿ ಸೆಂಟರ್ಸ್ 1456. ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್ 400. ಈ ರೀತಿ 3764 ಟೋಟಲ್ ಹಾಸ್ಪಿಟಲ್ಸ್ ಇದೆ. ಕಳೆದ ಮೂರು ವರ್ಷದಲ್ಲಿ 6000

ಹಾಸ್ಪಿಟಲ್ಸ್‌ಗಳನ್ನು ಅಪ್‌ಗ್ರೇಡೇಷನ್ ಮಾಡಿದ್ದೇವೆ. ಈಗ 147 ಹಾಸ್ಪಿಟಲ್ಸ್‌ಗಳನ್ನು ಅಪ್‌ಗ್ರೇಡೇಷನ್ ಮಾಡಲಿಕ್ಕೆ ಪ್ರಯತ್ನಿಸಿದ್ದೇವೆ. 900 ವೆಟರ್ನರಿ ವೈದ್ಯರ ಹುದ್ದೆ ಖಾಲಿ ಇರುವುದರಿಂದ 192 ಹುದ್ದೆಗಳಿಗೆ ಕ್ಯಾಬಿನೆಟ್‌ಗೆ ಸಬ್ಮಿಟ್ ಮಾಡಿದ್ದೇವೆ. ಅದಕ್ಕೆ ಬೇರೆ ಕಮಿಟಿ ಮಾಡಿದ್ದಾರೆ. ಆ 192 ಹುದ್ದೆಗಳನ್ನು ರೆಗ್ಯುಲರೈಸ್ ಮಾಡಿ ಇನ್ನೂ 250 ವೈದ್ಯರ ಹುದ್ದೆಗಳನ್ನು ತುಂಬಲು ಹಣಕಾಸು ಇಲಾಖೆಯವರು ಅಪ್ರೂವಲ್ ಕೊಟ್ಟಿದ್ದಾರೆ. ಇವೆಲ್ಲಾ ಪ್ರೋಸೆಸ್ ಕಂಪ್ಲೀಟ್ ಆದಮೇಲೆ ಈ ವರ್ಷದ ಬಜೆಟ್‌ನಲ್ಲಿ ಹೊಸದಾಗಿ 69 ಆಸ್ಪತ್ರೆಗಳನ್ನು ತೆಗೆಯಬೇಕೆಂದಿದೆ. ಅದರಲ್ಲಿ ಮೋಸ್ಟ್ ಬ್ಯಾಕ್‌ವರ್ಡ್ ಏರಿಯಾ ಯಾವುದು ಇದೆ. ಅದಕ್ಕೆ ಪ್ರಯಾರಿಟಿವೈಸ್ ತೆಗೆದುಕೊಂಡು ಅನಂತರ ಪಾಪ್ಯುಲೇಷನ್ ವೈಸ್ ಆಸ್ಪತ್ರೆಯನ್ನು ತೆಗೆಯಬೇಕಾಗಿತ್ತು. ಪಾಪ್ಯುಲೇಷನ್ ವೈಸ್ ಎಲ್ಲಿ ಆಸ್ಪತ್ರೆಯಿಲ್ಲ. ಅದನ್ನು ಸಹ ಪ್ರಯಾರಿಟಿವೈಸ್ ಮಾಡುತ್ತೇವೆ. ಹರಪನಹಳ್ಳಿಯಲ್ಲಿ ಎರಡು ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಕೇಳಿದ್ದಾರೆ. ಈ ಲಿಸ್ಟ್‌ನಲ್ಲಿ ಅದನ್ನು ಅಪ್‌ಗ್ರೇಡೇಷನ್ ಮಾಡಿಕೊಡುತ್ತೇನೆಂದು ತಮ್ಮ ಮೂಲಕ ಅವರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಅಪ್‌ಗ್ರೇಡೇಷನ್ ಮಾಡಿದರೂ ಅಲ್ಲಿ ಡಾಕ್ಟರ್ ಸಿಗುವುದಿಲ್ಲ. ಇವರು ಹೇಳಿದ ಹಾಗೆ ಖಾಲಿ ಇವೆ. ಹಾಗಾಗಿ ದಯಮಾಡಿ ಅಪ್‌ಗ್ರೇಡೇಷನ್ ಮಾಡುವುದನ್ನು ಸ್ವಲ್ಪ ತಡೆಹಿಡಿದು ಒಂದೊಂದು ಸಣ್ಣ ದವಾಖಾನೆಗೆ ಒಬ್ಬೊಬ್ಬರನ್ನು ಸ್ಟಾಫೆಮೆನ್ ಹಾಕಿಬಿಡಿ. ಒಂದು ಅಪ್‌ಗ್ರೇಡೇಷನ್ ಮಾಡಿದರೆ ಪ್ರತಿ ಪಂಚಾಯಿತಿಗೆ 4 ಸ್ಟಾಫ್‌ಮೆನ್ ಹಾಸ್ಪಿಟಲ್ಸ್ ತೆಗೆಯಬಹುದು. ನೀವು ಈ ರೀತಿ ಮಾಡಿದರೆ ಎಲ್ಲಾ ಪಂಚಾಯ್ತಿಗೊಂದು ಆಗುತ್ತದೆ.

ಶ್ರೀ ಕಾರಜೋಳ ಗೋವಿಂದ ಮಕಟಪ್ಪ : ಈಗ ಸಾಕಷ್ಟು ಹಣಕಾಸಿನ ತೊಂದರೆಯಿರುವುದರಿಂದ ಎಲ್ಲಾ ಕಡೆ ಆಸ್ಪತ್ರೆಗಳನ್ನು ತೆಗೆಯಲಿಕ್ಕೆ ಆಗುವುದಿಲ್ಲ. ಎಂಟು ಅಥವಾ ಹತ್ತು ಹಳ್ಳಿಗಳ ನಡುವೆ ಒಂದೊಂದು ಮೊಬೈಲ್ ಆಸ್ಪತ್ರೆಗಳನ್ನು ತೆಗೆಯಬಹುದು. ತಾಲ್ಲೂಕಿಗೆ ಒಂದೆರೆಡು ಯೂನಿಟ್ ಕೊಟ್ಟರೆ ತೊಂದರೆಯೇನಿಲ್ಲ. ಅವರು ಎಲ್ಲ ಹಳ್ಳಿಗಳಿಗೂ ಸುತ್ತುತ್ತಿರುತ್ತಾರೆ. ಹಾಗಾಗಿ ಅದನ್ನು ತಾವು ಪರಿಶೀಲನೆ ಮಾಡಬಹುದು.

ಶ್ರೀ ಜಯಪ್ರಕಾಶ ಹೆಗ್ಡೆ ಕೆ : ನಂಜುಂಡಪ್ಪ ವರದಿಯ ಆಧಾರದ ಮೇಲೆ ಕೊಡುತ್ತೇವೆಂದು ತಾವು ಹೇಳುತ್ತಿದ್ದೀರಿ. ಅವರೇನು ಕೊಡಬಾರದು ಅಂತ ಹೇಳಿದ್ದಾರೆಯೇ? ಇಂತಹ ಕಡೆಗೆ ಹೋಗಬಾರದು ಅಂತ ಹೇಳಿಲ್ಲ. ಎಲ್ಲೆಲ್ಲಿ ಕಡಿಮೆಯಿದೆಯೆಂದು ವರದಿಯನ್ನು ಕೊಟ್ಟಿದ್ದಾರೆ. ಅವರನ್ನು ಯಾಕೆ ಎಲ್ಲರೂ

ಸೇರಿ ಬಯ್ಯುಸುತ್ತೀರಿ. ನೀವ್ಯಾರಾದರೂ ಅವರ ವರದಿಯನ್ನು ಓದಿದ್ದೀರಾ? ಯಾರಾದರೂ ಓದಿದ್ದರೆ ಹೇಳಿ. ಪ್ರತಿಯೊಂದಕ್ಕೂ ನೀವು ಓದದೇನೆ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಅಲ್ಲಿ ಕೊಡುತ್ತಿದ್ದೇವೆ. ಇಲ್ಲಿ ಕೊಡುತ್ತಿದ್ದೇವೆ ಅಂತ ಹೇಳುತ್ತಿದ್ದಾರೆ. ಯಾರಿಗೂ ಕೊಡಬಾರದು ಅಂತ ಎಲ್ಲಿ ಹೇಳಿದ್ದಾರೆ. ಹೇಳಿ?

ಡಾ : ವೈ. ನಾಗಪ್ಪ : ಮಾನ್ಯ ಎಸ್.ಎಸ್. ಪಾಟೀಲ್ ಹಾಗೂ ಮಾನ್ಯ ಕಾರಜೋಳ ಗೋವಿಂದ ವೆಂಕಟಪ್ಪನವರು ಹೇಳಿದಂತೆ ನಾವು ಪ್ರತಿಯೊಂದು ಪಂಚಾಯಿತಿಯ ಹೆಡ್‌ಕ್ವಾರ್ಟರ್ಸ್‌ಗೆ ಒಂದೊಂದು ಆಸ್ಪತ್ರೆಯನ್ನು ತೆಗೆಯಬೇಕೆಂದು ಪ್ರಪೋಸಲ್ ರೆಡಿ ಮಾಡಿರುತ್ತೇವೆ. ಇದರೊಂದಿಗೆ ಈಗಾಗಲೇ 167 ಮೊಬೈಲ್ ಆಸ್ಪತ್ರೆಗಳು ಇವೆ. ಅಷ್ಟಲ್ಲದೆ ಇನ್ನು 400 ಮೊಬೈಲ್ ಆಸ್ಪತ್ರೆಗಳನ್ನು ತೆಗೆಯಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪ ಅವರು ಸಲಹೆಯನ್ನು ನೀಡಿದ್ದಾರೆ. ಅದರಂತೆ ಇನ್ನು ಹೊಸದಾಗಿ 400 ಮೊಬೈಲ್ ಆಸ್ಪತ್ರೆಗಳನ್ನು ತೆಗೆಯಲಿಕ್ಕೆ ಪ್ರಪೋಸಲ್ ಅನ್ನು ರೆಡಿ ಮಾಡಿ ಸಬ್ಮಿಟ್ ಮಾಡಿದ್ದೇವೆ. ಮೋಸ್ಟ್‌ಲಿ ಅದು ಸ್ವಲ್ಪ ದಿವಸದಲ್ಲಿ ಆಗಬಹುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	;	2639
ಸದಸ್ಯರ ಹೆಸರು	:	ಶ್ರೀ. ರವಿ ಸಿ.ಟಿ.(ಚಿಕ್ಕಮಗಳೂರು)
ವಿಷಯ	:	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ
ಸಚಿವರ ಹೆಸರು ಮತ್ತು ಪದನಾಮ	;	ಡಾ : ವೈ.ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ.	ಪ್ರಶ್ನೆ
ಅ.	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡುತ್ತಿರುವ ಯೋಜನೆಗಳೆಷ್ಟು ?

ಉತ್ತರ

ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ಪಡೆಯಲು 2 ಯೋಜನೆಗಳು ಇರುತ್ತವೆ.

ಕ್ರ.ಸಂ.	ಪ್ರಶ್ನೆ
ಆ.	ಅವು ಯಾವುವು ಆ ಯೋಜನೆಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಅನುಷ್ಠಾನಗೊಂಡಿವೆ ಆ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ.